# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 382 (279) |
| ಸದಸ್ಯರ ಹೆಸರು : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 12-12-2018 |
| ಉತ್ತರಿಸುವ ಸಚಿವರು : | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಲು ಸರ್ಕಾರ ಹೊಸ ಮಾರ್ಗಸೂಚಿ ಪ್ರಕಟಿಸಿದ್ದರೂ, ಅಕ್ರಮ ಮರಳು ದಂಧೆ ಅವ್ಯಾಹತವಾಗಿ ಸಾಗಿರುವುದರಿಂದ ಜನಸಾಮಾನ್ಯರಿಗೆ ಮರಳು ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | **ಸರ್ಕಾರದ ಗಮನಕ್ಕೆ ಬಂದಿರುತ್ತದೆ.** ರಾಜ್ಯ ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994ಕ್ಕೆ ದಿನಾಂಕ: 12-08-2016 ತಿದ್ದುಪಡಿ ತರಲಾಗಿದ್ದು, ತಿದ್ದುಪಡಿ-2016ರ ನಿಯಮಗಳನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮದಲ್ಲಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಾಜ್ಯದ ನದಿ ಪಾತ್ರಗಳಲ್ಲಿರುವ ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ಪ್ರಸ್ತುತ ರಾಜ್ಯದಲ್ಲಿ 216 ಮರಳು ಬ್ಲಾಕ್‌ಗಳನ್ನು ಟೆಂಡರ್-ಕಂ-ಹರಾಜು ಮೂಲಕ ಮರಳು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. 2018-19ನೇ ಸಾಲಿನ ಅಕ್ಟೋಬರ್-2018ರ ಅಂತ್ಯದವರೆಗೆ **529409 ಮೆ.ಟನ್** ಮರಳನ್ನು ಸದರಿ ಮರಳು ಬ್ಲಾಕ್‌ಗಳಲ್ಲಿ ಗಣಿಗಾರಿಕೆ ನಡೆಸಿ, ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗಿರುತ್ತದೆ.<br>• ಸರ್ಕಾರಿ ಕಾಮಗಾರಿಗಳಿಗೆ ಮರಳು ಬ್ಲಾಕ್‌ಗಳನ್ನು ಮೀಸಲಿರಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆ ಮಾಡಲು **15** ಮರಳು ಬ್ಲಾಕ್‌ಗಳಿಗೆ ಮರಳು ಗುತ್ತಿಗೆಯನ್ನು ಮಂಜೂರು ಮಾಡಲಾಗಿರುತ್ತದೆ. 2018-19ನೇ ಸಾಲಿನ ಅಕ್ಟೋಬರ್-2018ರ ಅಂತ್ಯದವರೆಗೆ **77286 ಮೆ.ಟನ್** ಮರಳನ್ನು ಸದರಿ ಮರಳು ಬ್ಲಾಕ್‌ಗಳಲ್ಲಿ ಗಣಿಗಾರಿಕೆ ನಡೆಸಿ, ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗಿರುತ್ತದೆ.<br>• ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ **23** ಮರಳು ಗುತ್ತಿಗೆಗಳನ್ನು ಪಟ್ಟಾ ಜಮೀನುಗಳಲ್ಲಿ ಮಂಜೂರು ಮಾಡಲಾಗಿರುತ್ತದೆ. 2018-19ನೇ ಸಾಲಿನ ಅಕ್ಟೋಬರ್-2018ರ ಅಂತ್ಯದವರೆಗೆ **469765 ಮೆ.ಟನ್** ಮರಳನ್ನು ಪಟ್ಟಾ ಜಮೀನುಗಳಲ್ಲಿ ಮಂಜೂರಾದ ಮರಳು |
| ಆ. | ಬಂದಿದ್ದಲ್ಲಿ, ಸರ್ಕಾರದ ಹೊಸ ಮಾರ್ಗಸೂಚಿಗಳೇನು; ಜನಸಾಮಾನ್ಯರು ಮನೆ ಕಟ್ಟಿಕೊಳ್ಳಲು ಎಷ್ಟು ಪ್ರಮಾಣದ ಮರಳನ್ನು ಶೇಖರಿಸಿಕೊಳ್ಳಬಹುದು ಹಾಗೂ ಹೇಗೆ ಸಾಗಿಸಬಹುದು; ಅದಕ್ಕಾಗಿ ರೂಪಿಸಿರುವ ನಿಯಮಗಳೇನು; | |

| | | |
|---|---|---|
| | | ಗಣಿ ಗುತ್ತಿಗೆ ಪ್ರದೇಶಗಳಿಂದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗಿರುತ್ತದೆ.<br>• ಕರಾವಳಿ ನಿಯಂತ್ರಣ ವಲಯ ಪ್ರದೇಶಗಳಲ್ಲಿ ದಿನಾಂಕ: 08.11.2011 ರ ಭಾರತ ಸರ್ಕಾರದ ಹವಾಮಾನ ಬದಲಾವಣೆ ಮಂತ್ರಾಲಯದ ಮಾರ್ಗಸೂಚಿಯಂತೆ, ಮರಳು ದಿಬ್ಬಗಳಲ್ಲಿ ಮರಳು ತೆಗೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ 2018-19ನೇ ಸಾಲಿನ ಅಕ್ಟೋಬರ್-2018ರ ಅಂತ್ಯದವರೆಗೆ **415663 ಮೆ.ಟನ್** ಮರಳನ್ನು ಮರಳು ದಿಬ್ಬಗಳಿಂದ ತೆರವುಗೊಳಿಸಿ, ಸರ್ಕಾರಿ ಹಾಗೂ ಸಾರ್ವಜನಿಕ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗಿರುತ್ತದೆ.<br>• ಎಂ-ಸ್ಯಾಂಡ್ ಉತ್ಪಾದನೆಯನ್ನು ಉತ್ತೇಜಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ **288** ಎಂ-ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ವಾರ್ಷಿಕ ಅಂದಾಜು **27 ದಶಲಕ್ಷ ಮೆ.ಟನ್** ಮರಳನ್ನು ಎಂ-ಸ್ಯಾಂಡ್ ಉತ್ಪಾದನೆ ಮಾಡಿ, ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗಿರುತ್ತದೆ.<br>• ಅಲ್ಲದೆ ದಿನಾಂಕ:16.11.2017 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ-1994 ತಿದ್ದುಪಡಿ ತಂದಿರುತ್ತದೆ. ತಿದ್ದುಪಡಿ ನಿಯಮ (31-ZF ಮತ್ತು 31-ZG) ದಲ್ಲಿ ವಿದೇಶದಿಂದ ಆಮದು ಮಾಡಿಕೊಂಡ ಮರಳನ್ನು ಸಾರ್ವಜನಿಕರಿಗೆ ಪೂರೈಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಪ್ರಸ್ತುತ **07** ವ್ಯಕ್ತಿ / ಸಂಸ್ಥೆಗಳಿಗೆ ವಿದೇಶಿ ಮರಳು ಆಮದು ನೋಂದಣಿಯನ್ನು ಮಾಡಿಕೊಡಲಾಗಿರುತ್ತದೆ.<br>ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಾವಳಿ-2016ರ ನಿಯಮ 31-Y ರಲ್ಲಿ ಮರಳು ಗಣಿ ಗುತ್ತಿಗೆ ಪಡೆದ ವ್ಯಕ್ತಿಗಳಿಗೆ ನದಿ ಪಾತ್ರದಲ್ಲಿ ತೆಗೆದ ಮರಳನ್ನು ಸ್ಟಾಕ್‌ಯಾರ್ಡ್‌ಗಳಲ್ಲಿ ಸಂಗ್ರಹಿಸಿ, ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಸ್ಟಾಕ್‌ಯಾರ್ಡ್‌ಗಳಿಂದ ಸಾರ್ವಜನಿಕರು ಮನೆ ಕಟ್ಟಲು ಅವಶ್ಯಕತೆ ಇರುವಷ್ಟು ಮರಳನ್ನು ರವಾನೆ ಪರವಾನಿಗೆಯಡಿಯಲ್ಲಿ ಸಾಗಾಣಿಕೆ ಮಾಡಿಕೊಂಡು ಶೇಖರಿಸಿಕೊಳ್ಳಬಹುದಾಗಿರುತ್ತದೆ. |
| ಇ. | ಅಕ್ರಮ ಮರಳು ಮಾಫಿಯಾ ರಾತ್ರಿ ವೇಳೆಯಲ್ಲಿ ತುಂಬಾ ನಡೆಯುತ್ತಿದ್ದು, ಅದನ್ನು ತಡೆಯಲು ಬಂದ ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಗಮನಕ್ಕೆ ಬಂದಿದೆ.<br>ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರಾಜ್ಯ ಸರ್ಕಾರವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994ಕ್ಕೆ ದಿನಾಂಕ: 12-08-2016 ತಿದ್ದುಪಡಿ ತರಲಾಗಿದ್ದು, ತಿದ್ದುಪಡಿ-2016ರ ನಿಯಮಗಳನ್ನು |

| | | |
|---|---|---|
| | | ಜಾರಿಗೊಳಿಸಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮಗಳ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.<br>• ಅನಧಿಕೃತ ಮರಳು ಗಣಿಗಾರಿಕೆ, ದಾಸ್ತಾನು, ಸಾಗಾಣಿಕೆಯನ್ನು ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.<br>• ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆಯನ್ನು ತಡೆಯಲು ಗಣಿ ಮತ್ತು ಖನಿಜ(ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22ರಡಿಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಾವಳಿ 1994ರ ನಿಯಮ 31-Rರ ಉಪ ನಿಯಮ 13 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯೋಜಿಸಲಾಗಿರುತ್ತದೆ.<br>• ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಗಳಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ಮರಳು ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br>• ಅನಧಿಕೃತ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ನಿಯಂತ್ರಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 31-Z ರಂತೆ ಜಿಲ್ಲೆಗಳಿಗೆ ಬೇಡಿಕೆಗೆ ಅನುಸಾರ ಕಾರ್ಪಸ್ ಫಂಡ್‌ನ್ನು ಬಿಡುಗಡೆ ಮಾಡಲಾಗುತ್ತಿದ್ದು, ಜಿಲ್ಲಾ ಮತ್ತು ತಾಲ್ಲೂಕು ಮರಳು ಸಮಿತಿಗಳ ಎಲ್ಲಾ ಸದಸ್ಯ ಇಲಾಖೆಗಳ ಅಧಿಕಾರಿಗಳು ಈ ಅನುದಾನವನ್ನು ಬಳಕೆ ಮಾಡಿಕೊಂಡು ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br>• ಅಲ್ಲದೆ ಸರ್ಕಾರವು ದಿನಾಂಕ: 16.01.2017 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ-1994 ಕ್ಕೆ ತಿದ್ದುಪಡಿ ತಂದಿದ್ದು, ತಿದ್ದುಪಡಿ ನಿಯಮ 43 ರ ಉಪನಿಯಮ 6,7 ಮತ್ತು 8 |

| | | |
|---|---|---|
| | | ರಲ್ಲಿ ಪರವಾನಿಗೆ ಪಡೆಯದೆ ಮರಳು ಹಾಗೂ ಇನ್ನಿತರೆ ಉಪಖನಿಜಗಳ ಸಾಗಾಣಿಕೆ ಮಾಡುವ ವಾಹನಗಳನ್ನು ಜಪ್ತಿಪಡಿಸಿಕೊಂಡು ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಹಾಗೂ ಜಪ್ತಿಪಡಿಸಿಕೊಂಡ ವಾಹನಗಳನ್ನು ಬಿಡುಗಡೆಗೊಳಿಸುವ ಸಂದರ್ಭದಲ್ಲಿ ವಾಹನ ಮೌಲ್ಯದ ಎರಡು ಪಟ್ಟು ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ವಾಹನ ಮಾಲೀಕರಿಂದ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಮೇಲ್ಕಂಡ ನಿಯಮಗಳಲ್ಲಿನ ಅವಕಾಶಗಳಂತೆ ಅಕ್ರಮ ಗಣಿಗಾರಿಕೆ ಹಾಗೂ ಸಾಗಾಣಿಕೆ ತಡೆಗಟ್ಟಲು ಕ್ರಮ ವಹಿಸಲಾಗಿರುತ್ತದೆ. |
| ಈ. | ಈವರೆಗೆ, ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ; ಬಾಕಿ ಇರುವ ಪ್ರಕರಣಗಳೆಷ್ಟು? (ವಿವರ ನೀಡುವುದು) | ರಾಜ್ಯದ ತುಮಕೂರು, ದಕ್ಷಿಣ ಕನ್ನಡ, ಗದಗ ಹಾಗೂ ಉಡುಪಿ ಜಿಲ್ಲೆಗಳಲ್ಲಿ 14 ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿರುತ್ತದೆ. ಸದರಿ ಪ್ರಕರಣಗಳು ಸಂಬಂಧಪಟ್ಟ ಮಾನ್ಯ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಸಿಐ 442 ಎಂಎಂಎನ್ 2018

(ರಾಜಶೇಖರ.ಬಿ.ಪಾಟೀಲ್)
ಗಣಿ ಮತ್ತು ಭೂ ವಿಜ್ಞಾನ ಇಲಾಖೆ
ಮುಜರಾಯಿ ಸಚಿವರು

## ಅನುಬಂಧ-1

## ಅಕ್ರಮ ಮರಳು ಗಣಿಗಾರಿಕೆ ತಡೆಯಲು ಹೋದ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ ಪ್ರಕರಣಗಳ ವಿವರಗಳು

| ಕ್ರ ಸಂ. | ಜಿಲ್ಲೆ | ತಾಲ್ಲೂಕು | ವರ್ಷ | ಕೃತ್ಯ ನಡೆದ ದಿನಾಂಕ | ಹಲ್ಲೆ ನಡೆಸಿದ ವ್ಯಕ್ತಿಗಳ ವಿವರಗಳು | ಹಲ್ಲೆಗೊಳಪಟ್ಟ ಅಧಿಕಾರಿಯ ಹೆಸರು ಮತ್ತು ಪದನಾಮ | ದಾಳಿನಡೆಸಿದವರ ಮೇಲೆ ಕೈಗೊಂಡ ಕ್ರಮ |
|---|---|---|---|---|---|---|---|
| 1 | ತುಮಕೂರು | ಶಿರಾ | 2014–15 | 20.02.2015 | ಜಗನ್ನಾಥ | ಹಾಲಪ್ಪ, ಸಹಾಯಕ ಸಬ್‌ಇನ್‌ಸ್ಪೆಕ್ಟರ್, ತಾವರೆಕರೆ. ಪೋಲೀಸ್ ಠಾಣೆ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:18/2015 |
| 2 | | ತುಮಕೂರು | 2014–15 | 10.10.2014 | ಕರಿ ಚಿಕ್ಕನಹಳ್ಳಿ ವಾಸಿ ದಾಳಪ್ಪ ಬಿನ್ ದಾಳಪ್ಪ ಮತ್ತು ಇತರರು. | ಚನ್ನಿಂಗ ರಾಮಯ್ಯ, ಕಂದಾಯ ಅಧಿಕಾರಿ. | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:283/2014 |
| 3 | | ಕುಣಿಗಲ್ | 2014–15 | 30.04.2014 | 1. ಅನಂತಕುಮಾರ<br>2. ಎಂ.ಟಿ.ಗುಡ್ಡೆಗೌಡ<br>3. ರಂಗನಾಥ | ವಿಜಯ ಕುಮಾರ್. ಎಂ.ಬಿ, ಲೋಕೋಪಯೋಗಿ ಇಲಾಖೆ, ಮತ್ತು ಇತರೆ 7 ಅಧಿಕಾರಿಗಳು | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:96/2014 |
| 4 | | ಕೊರಟಗೆರೆ | 2015–16 | 07.08.2015 | ಚಿಟ್ಟಿ ಪಟ್ಟಿ ಪಾಳ್ಯವಾಸಿ ನಟರಾಜು ಬಿನ್ ನಿಂಗಪ್ಪ | ಮೃತ್ಯುಂಜಯ, ಪಿ.ಎಸ್.ಐ ಮತ್ತು ಇತರೆ 03 ಜನ ಪೋಲೀಸ್ ಸಿಬ್ಬಂದಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:271/2015 |
| 5 | | ಕೊರಟಗೆರೆ | 2015–16 | 21.09.2015 | ಕೆಂಡಗನಹಳ್ಳಿ ವಾಸಿಗಳಾದ ಜಗದೀಶ ಬಿನ್ ಅಂಜನಪ್ಪ ಕುಮಾರ ಬಿನ್ ರಾಮಕೃಷ್ಣ ರಮೇಶ ಬಿನ್ ಹನುಮಂತೆಗೌಡ | ಮುನಿರಾಜು.ಎಸ್, ಪಿ.ಎಸ್.ಐ ಮತ್ತು ಇತರೆ 02 ಜನ ಪೋಲೀಸ್ ಸಿಬ್ಬಂದಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:313/2015 |
| 6 | | ಕೊರಟಗೆರೆ | 2016–17 | 05.06.2016 | ನಾಗರಾಜು ಮತ್ತು ಇತರರು | ರಮೇಶ್ ಬಾಬು, ಪೋಲೀಸ್ ಸಿಬ್ಬಂದಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:128/2016 |
| 7 | | ತುರುವೇಕೆರೆ | 2016–17 | 09.09.2016 | ಮಂಜುನಾಥ ಬಿನ್ ವೆಂಕಟೇಶ ಅವರ ಸಹೋದರ ಕುಮಾರ | ಹೊನ್ನೇಗೌಡ, ಪಿ.ಎಸ್.ಐ ಮತ್ತು ಚಂದ್ರಶೇಖರ್, ಪೋಲೀಸ್ ಸಿಬ್ಬಂದಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:175/2016 |
| 8 | | ತುಮಕೂರು | 2016–17 | 19.01.2017 | ರಫೀಕ್ ಮತ್ತು ಇತರರು | ಯೋಗೇಶ್, ಪೋಲೀಸ್ ಸಿಬ್ಬಂದಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:03/2017 |
| 9 | ಮಂಗಳೂರು | ಮಂಗಳೂರು | 2015–16 | ಜನವರಿ–2016 | ಎ.ಕೆ. ಇಮ್ರಾನ್ | ಗಿರೀಶ್ ಮೋಹನ್, ಭೂವಿಜ್ಞಾನಿ, | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:12/2016 |
| 10 | | ಬಂಟ್ವಾಳ | 2016–17 | 20.02.2017 | ಮುಟ್ಟು ಮೊನು | ಗಿರೀಶ್ ಮೋಹನ್, ಭೂವಿಜ್ಞಾನಿ, | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:23/2017 |

| | | | | | | | |
|---|---|---|---|---|---|---|---|
| 11 | | ಬಂಟ್ವಾಳ | 2016–17 | 03.03.2017 | ಗೋವಿಂದ ಪ್ರಭು | ಗಿರೀಶ್ ಮೋಹನ್, ಭೂವಿಜ್ಞಾನಿ, | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:55/2017 |
| 12 | | ಮಂಗಳೂರು | 2016–17 | 30.03.2016 | ರಫೀಕ್ ಅಡ್ಡೂರು | ಬಿ.ಕೆ.ಮೂರ್ತಿ, ಭೂವಿಜ್ಞಾನಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:92/2016 |
| 13 | ಗದಗ | ಲಕ್ಷ್ಮೇಶ್ವರ | 2016–17 | 5.2.2017 | 1. ಮಂಜಯ ಹಿರೇಮಠ್, ಬಟ್ಟೂರು ವಾಸಿ ಮತ್ತು ಇತರರು<br>2. 21, ರವಿ ಬಿನ್ ಹನುಮಂತಪ್ಪ, ಹಟ್ಟಾಳ್, ಬಟ್ಟೂರು ಮತ್ತು ಇತರರು 113 ಜನರು<br>3. 22, ಮುತ್ತು ಕರಿಗಾರ, ಬಟ್ಟೂರು ಮತ್ತು ಇತರರು 150 ಜನರು<br>4. 23, ಬರಮಪ್ಪ ನೀಲಪ್ಪ, ದೂಟ್ಟೂರು, ಬಟ್ಟೂರು ವಾಸಿ ಮತ್ತು ಇತರರು<br>5. ಮಹಾಂತೇಶ್ ಶಿಂಧ್ಯೆ, ನಲೋಗಲ್ ಮತ್ತು ಇತರರು | ದೇವನಂದ, ಪೋಲೀಸ್ ಉಪ ನಿರೀಕ್ಷಕರು ಮತ್ತು ಇತರೆ ಇಬ್ಬರು ಪೋಲೀಸ್ ಸಿಬ್ಬಂದಿ | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:20,21,22,23,24/2016 |
| 14 | ಉಡುಪಿ | ಕುಂದಾಪುರ | 2017–18 | 02.04.2017 | ಬಾಸ್ಕರ್ ಮೊಗವೀರ, ಕೆ.ನಧಿಮ್ ಮತ್ತು ಇತರರು | ಪ್ರಿಯಾಂಕ ಮೇರಿ ಫ್ರಾನ್ಸಿಸ್, ಐ.ಎ.ಎಸ್ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ಹಾಗೂ ಶಿಲ್ಪಾನಾಗ್, ಕುಂದಾಪುರ ಉಪವಿಭಾಗಾಧಿಕಾರಿ ಮತ್ತು ಇತರೆ 05 ಕಂದಾಯ ಇಲಾಖೆ ಅಧಿಕಾರಿಗಳು | ಎಫ್.ಐ.ಆರ್ ದಾಖಲಿಸಲಾಗಿರುತ್ತದೆ ಸಂಖ್ಯೆ:42/2017 |

M.C.[illegible]
DD (MA)